ರಾಜ್ಯದಲ್ಲಿ ಇತ್ಯರ್ಥವಾಗದೇ ಇರುವ ಕ್ರಿಮಿನಲ್ ಮೊಕದ್ದಮೆಗಳು

2424 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಹಳ ದಿನಗಳಿಂದ ಇತ್ಯರ್ಥವಾಗದೇ ಇರುವ ಕ್ರಿಮಿನಲ್ ಮೊಕದ್ದಮೆ ಪ್ರಕರಣಗಳೆಷ್ಟು? (ಜಿಲ್ಲಾವಾರು ವಿವರವನ್ನು ನೀಡುವುದು)

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಕಳೆದ ಒಂದೂವರೆ ವರ್ಷಕ್ಕೂ ಮೇಲ್ಪಟ್ಟು ಇತ್ಯರ್ಥವಾಗದೇ ತನಿಖಾ ಹಂತದಲ್ಲಿರುವ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ 2316 ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 9666.

ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ. ಸಂ	ಜಿಲ್ಲೆ	ತನಿಖಾ ಹಂತದ ಲ್ಲಿರುವ ಪ್ರಕರಣಗಳ ವಿವರ	ವಿಚಾರಣಾ ಹಂತದ ಲ್ಲಿರುವ ಪ್ರಕರಣಗಳು
1	2	3	4
1.	ಬೆಂಗಳೂರು ನಗರ	22	3007
2.	ಮೈಸೂರು ನಗರ	20	449
3.	ಹುಬ್ಬಳ್ಳಿ-ಧಾರವಾಡ ನಗರ	4	162
4.	ಬೆಂಗಳೂರು ಜಿಲ್ಲೆ	321	277
5.	ತುಮಕೂರು	41	545
6.	ಕೋಲಾರ	117	171
7.	ಕೆ.ಜಿ.ಎಫ್.	15	34
8.	ಮೈಸೂರು ಜಿಲ್ಲೆ	41	301
9.	ಮಂಡ್ಯ	27	133
10.	ಹಾಸನ	3	185
11.	ಕೊಡಗು	-	408
12.	ಚಿತ್ರದುರ್ಗ	7	1360

1	2	3	4
13.	ಶಿವಮೊಗ್ಗ	2	242
14.	ಬಳ್ಳಾರಿ	-	162
15.	ದ. ಕ ಮಂಗಳೂರು	24	864
16.	ಚಿಕ್ಕಮಗಳೂರು	9	325
17.	ಉ.ಕ. ಕಾರವಾರ	656	207
18.	ಬೆಳಗಾಂ	951	261
19.	ಬಿಜಾಪುರ	-	94
20.	ಧಾರವಾಡ ಜಿಲ್ಲೆ	16	108
21.	ಗುಲ್ಬರ್ಗಾ	28	129
22.	ಬೀದರ್	8	76
23.	ರಾಯಚೂರು	3	158
24.	ರೈಲ್ವೇಸ್	1	120
	ಒಟ್ಟು	**2316**	**9,666**

ಹಾಸನ ಜಿಲ್ಲೆಯಲ್ಲಿ ಎಂ.ಯು.ಎಸ್. ಎಸ್. ಗಳ ಪ್ರಗತಿ

2425 - ಶ್ರೀ ಜಿ. ಶಿವರಾಮು (ಗಂಡಸಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆಗೆ 1994-95, 1995-96 ಮತ್ತು 1996-97ರಲ್ಲಿ ಮಂಜೂರಾತಿ -ಯಾಗಿರುವ ಎಂ.ಯು.ಎಸ್.ಎಸ್. ಸ್ಕೀಮ್‌ಗಳೆಷ್ಟು ?

ಆ) ಯಾವ ಮೂಲದಿಂದ ಹಣ ಒದಗಿಸಿದೆ? ಅವುಗಳ ಪ್ರಗತಿಯೆಷ್ಟು ? (ಸ್ಥಳ ಮತ್ತು ಪ್ರಗತಿಯನ್ನು ವರ್ಷವಾರು ಒದಗಿಸುವುದು)

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಹಾಸನ ಜಿಲ್ಲೆಗೆ 1994-95, 1995-96 ಮತ್ತು 1996-97 ರಲ್ಲಿ ಮಂಜೂರಾಗಿರುವ ಎಂ.ಯು.ಎಸ್.ಎಸ್.ಗಳು ಮತ್ತು ಅವುಗಳ ಪ್ರಗತಿಗಳು, ಹಣ ಬಿಡುಗಡೆಯ ಮೂಲಗಳು - ವಿವರಗಳನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ.